# ಮೊಬೈಲ್ ಮುಗಿಯದ ಸವಾಲು

ಶಾಲೆಗಳು ತೆರೆದಿರುವ ಸಂದರ್ಭದಲ್ಲಿ ಮೊಬೈಲ್ ನಿರ್ವಹಣೆಯ ಪ್ರಶ್ನೆ ಮತ್ತೆ ಎದುರಾಗಿದೆ. ಆ ಸವಾಲನ್ನು ಪೋಷಕರೇ ಬಗೆಹರಿಸಿಕೊಳ್ಳಬೇಕಾಗಿದೆ.

■ ಸ್ವಯಂಪ್ರಭಾ

ನೇಶಿನಿ ಮತ್ತೆ ಶಾಲೆಗೆ ಹೋಗಲಾರಂಭಿಸಿದ್ದಾನೆ. ಶಾಲೆಯ ಬಾಗಿಲು ತೆರೆದುದರಿಂದ ಅವನಿಗೆ ಭಾರೀ ಖುಷಿ. ಮನೆಯೊಳಗೇ ಇದ್ದು, ಸ್ನೇಹಿತರೊಂದಿಗೆ ಆಟವಾಡಿ, ಜಗಳವಾಡಿ, ಟೂ ಬಿಟ್ಟು ಮತ್ತೆ ರಾಜಿಯಾಗಿ, ಅವನಿಗೆ ಇಷ್ಟು ದಿನಗಳಲ್ಲಿ ಒಂದು ರೀತಿಯ ಬೇಸರವೇ ಮೂಡಿಬಿಟ್ಟಿತ್ತು. ಶಾಲೆಯ ಬಾಗಿಲು ಮತ್ತೆ ತೆರೆದು ತರಗತಿ ಯಾವಾಗ ಆರಂಭವಾಗುವುದೋ ಎಂದು ಕಾಯುತ್ತಿದ್ದ. ಸ್ನೇಹಿತರನ್ನು ಮಾತನಾಡಿಸುವ, ತರಗತಿಯೊಳಗೆ ಸಾಲಾಗಿ ಕುಳಿತುಕೊಳ್ಳುವ, ಅಕ್ಕರೆಯ ಟೀಚರ್ ಅನ್ನು ಮಾತನಾಡಿಸುವ, ಅಸೆಂಬ್ಲಿಯಲ್ಲಿ ಸ್ಟಾಂಡ್ ಎಟ್ ಈಸ್ ಎನ್ನುವುದನ್ನು ಕೇಳಿಸಿಕೊಳ್ಳುವ ಸಂಭ್ರಮದ ಗಳಿಗೆಗಾಗಿ ಕಾತರಿಸುತ್ತಿದ್ದ.

ಶಾಲೆ ಆರಂಭವಾಗಿ ಪಾಠ ಪುಸ್ತಕವನ್ನು ತೆರೆಯುವ ಕ್ಷಣಗಳು ಕೊನೆಗೂ ಬಂದೇ ಬಿಟ್ಟವು. ಅಷ್ಟೇ ಏಕೆ, ಕೆಲವೇ ದಿನಗಳಲ್ಲಿ ಮಕ್ಕಳ ದಿನಾಚರಣೆಯೂ ಬಂದುದರಿಂದ ಕ್ಲಾಸ್‌ನಲ್ಲಿ ಎಲ್ಲರೂ ಖುಷಿಪಡಲು ಕಾರಣವೊಂದು ಸಿಕ್ಕಿತು.

ಮಕ್ಕಳ ದಿನಾಚರಣೆಯ ಮಹತ್ವದ ಬಗ್ಗೆ ಒಂದು ಭಾಷಣ ಮಾಡುವಂತೆ ಟೀಚರ್ ನೇಶಿನಿಗೆ ಹೇಳಿದರು. ಅರೆ, ತಕ್ಷಣ ಹೀಗೆ ಭಾಷಣ ಮಾಡುವುದು ಹೇಗೆ ಎಂದು ನೇಶಿನಿಗೆ ಒಂದು ಕ್ಷಣ ಚಿಂತೆಯಾಯಿತು. ಜವಾಹರ್ ಲಾಲ್ ನೆಹರು ಅವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುತ್ತಾರೆ ಎಂಬುದನ್ನು ಅವನು ತಿಳಿದುಕೊಂಡಿದ್ದ. ಟೀಚರ್ ಬಳಿ, ಮೊಬೈಲ್ ಕೇಳಿ ಪಡೆದು, ನೆಹರು ಅವರಿಗೆ ಸಂಬಂಧಿಸಿದ ಮಾಹಿತಿಗಳನ್ನು ಹುಡುಕಿ, ಅದನ್ನು ಪುಸ್ತಕದ ಒಂದು ಹಾಳೆಯಲ್ಲಿ ಬರೆದಿಟ್ಟುಕೊಂಡು, ಭಾಷಣವನ್ನು ಸಿದ್ಧಪಡಿಸಿದ. ಒಂದಿಷ್ಟು ಹೊತ್ತು ಅವುಗಳನ್ನು ಮನನ ಮಾಡಿಕೊಂಡು, ವೇದಿಕೆ ಹತ್ತಿ ಭಾಷಣ ಮಾಡಿದ.

ಜೊತೆಗೆ ಸ್ನೇಹಿತೆಗೂ ಮೊಬೈಲ್‌ನಿಂದ ಒಂದಷ್ಟು ಮಾಹಿತಿಗಳನ್ನು ಸಂಗ್ರಹಿಸಿ, ಒಂದು ಪುಟ್ಟ ಭಾಷಣವನ್ನು ಬರೆದುಕೊಟ್ಟಿದ್ದ. ಅವಳೂ ವೇದಿಕೆಯೇರುವುದನ್ನು ಕಾಯುತ್ತಾ ಕುಳಿತರೆ, ‘ಅರೆ ಅವಳು ಭಾಷಣ ಮಾಡದೆಯೇ ವಾಪಸ್ ಬಂದಳಲ್ಲ’ ಎಂದು ಬೇಸರವೆನಿಸಿತು.

ಕೋವಿಡ್ ಪೂರ್ವದಲ್ಲಿ ಮಕ್ಕಳು ಮೊಬೈಲ್‌ನಿಂದ ಬಹಳ ದೂರವಿದ್ದರು. ಕೋವಿಡ್ ಸಂದರ್ಭದ ನಂತರ ಅದು ಅವರ ಶಾಲಾಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಲಾಕ್‌ಡೌನ್ ಹೇರಿದ್ದಾಗ, ಮೊಬೈಲ್ ನೋಡಿ ಮಕ್ಕಳು ಹಾಳಾಗುತ್ತಿದ್ದಾರೆಂದು ಪೋಷಕರು ಅಲವತ್ತುಕೊಂಡರು. ಮೊಬೈಲ್ ಲೋಕದೊಳಗೆ ಮುಳುಗಿರುವ ಈ ಮಕ್ಕಳೊಡನೆ ಏನನ್ನಾದರೂ ಹೇಗೆ ಮಾತನಾಡುವುದು ಎಂದು ಪೇಚಾಡಿಕೊಂಡರು. ಪರೀಕ್ಷೆಗಳನ್ನು ಬರೆದು ಇವರಿನ್ನು ತರಗತಿಗಳನ್ನು ಹೇಗೆ ಪಾಸು ಮಾಡುವರೋ ಎಂದು ಕಳವಳಗೊಂಡರು.

ಈಗಂತೂ ಒಂದು ವಿಷಯ ಸ್ಪಷ್ಟವಾಗಿದೆ. ಮಕ್ಕಳ ಬದುಕಿನಲ್ಲಿ ಯಾವುದೇ ಒಳಿತು, ಕೆಡುಕು ಎದುರಾದರೂ ಅದನ್ನು ಹೇಗೆ ಸ್ವೀಕರಿಸಬೇಕು ಎನ್ನುವ ಮೂಲಪಾಠ ಅವರಿಗೆ ದೊರೆತರೆ ಸಾಕು – ಅದುವೇ ಅವರೊಡನೆ ಶಾಶ್ವತವಾಗಿ ಉಳಿಯುತ್ತದೆ.

ಮೊಬೈಲ್ ಅನ್ನು ಮಕ್ಕಳಿಂದ ದೂರವಿಡುವ ಕಾರ್ಯದಲ್ಲಿ ದೊಡ್ಡವರು ತಕ್ಕಮಟ್ಟಿಗೆ ಯಶಸ್ವಿಯಾಗಬಹುದೇನೋ. ಆದರೆ ದಿನಗಳೆದಂತೆ ಒಂದಲ್ಲ ಒಂದು ಆವಿಷ್ಕಾರ ಮಕ್ಕಳ ಬಳಿಗೆ ಬರುತ್ತಲೇ ಇರುತ್ತದೆ. ಅವುಗಳೆಲ್ಲ ನಮ್ಮ ಬದುಕಿಗೆ ಎಷ್ಟು ಪೂರಕ, ಹೇಗೆ ಬಳಸಿಕೊಂಡರೆ ಅವುಗಳ ಲಾಭ ಪಡೆದು ನಾವು ಜೀವನದಲ್ಲಿ ಮುಂದುವರೆಯಬಹುದು ಎಂಬುದನ್ನು ಮಕ್ಕಳಿಗೆ ತಿಳಿಸಿಕೊಡುವ ಶಿಕ್ಷಣದ ಅಗತ್ಯವಂತೂ ಇದ್ದೇ ಇದೆ.

ಉದಾಹರಣೆಗೆ, ಒಂದೆರಡು ವರ್ಷಗಳ ಹಿಂದೆ ಇಂಟರ್ನೆಟ್ ಲಭ್ಯತೆ ಸುಲಭವಿರಲಿಲ್ಲ. ಮೋಡೆಮ್ ಅಳವಡಿಸಿಕೊಂಡು ಅಥವಾ ಮನೆಗೆ ವೈಫೈ ಅಳವಡಿಸಿಕೊಳ್ಳುವ ದೀರ್ಘ ಪ್ರಕ್ರಿಯೆಯ ನಂತರವಷ್ಟೇ ಇಂಟರ್ನೆಟ್ ಸಂಪರ್ಕ ಸಿಗುತ್ತಿತ್ತು. ಸಂಪರ್ಕಕ್ಕೆ ಮುನ್ನ ಅನೇಕ ಭೌತಿಕ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು. ಹಾಗಾಗಿ ಅದು ಎಲ್ಲರಿಗೂ ಸಾಧ್ಯವಾಗುವ ವಿಷಯವೂ ಆಗಿರಲಿಲ್ಲ. ಆದರೆ ಇಂದು, ಇಂಟರ್ನೆಟ್ ಎನ್ನುವುದು ಬೆರಳತುದಿಯ ಸ್ಪರ್ಶದಲ್ಲೇ ಕೈಗೆಟುಕುವ, ಹೊಸ ಲೋಕವನ್ನು ತೆರೆಯುವ ಸುಲಭ ವ್ಯವಸ್ಥೆಯಾಗಿದೆ. ಹಾಗಾಗಿ, ಅಮ್ಮಂದಿರು ಸುಮ್ಮನೇ ಡೇಟಾ ಆಫ್ ಮಾಡಿ ಮಕ್ಕಳ ಕೈಗೆ ಮೊಬೈಲ್ ಕೊಟ್ಟರೂ, ಅವರು ಅದನ್ನು ನಿರ್ವಹಿಸುವುದರಲ್ಲಿ ಚತುರರು. ಮೊನ್ನೆ ತಾನೇ ಶ್ರೀನಿಧಿ ಪುಟ್ಟಿಗೆ ಮೊಬೈಲ್ ಸುಲಭವಾಗಿ ಸಿಗಬಾರದು ಎಂಬ ಕಾರಣಕ್ಕೆ ಅವಳಮ್ಮ ಅದಕ್ಕೆ ಥಂಬ್ ಲಾಕ್ ಹಾಕಿಟ್ಟಿದ್ದರು. ಆದರೆ ಶ್ರೀನಿಧಿಗೆ ಈ ಬಂಧನವೆಲ್ಲ ಯಾವ ಲೆಕ್ಕ? ಮರುದಿನವೇ ಮಲಗಿದ್ದ ಅಮ್ಮನ ಬೆರಳನ್ನು ಮೊಬೈಲ್‌ಗೆ ಒತ್ತಿ ಹಿಡಿದು, ಅದು ಬಾಗಿಲು ತೆರೆಯುತ್ತಲೇ, ಚಂಗನೇ ಜಿಗಿದು ಅಲ್ಲಿಂದ ಪರಾರಿಯಾಗಿದ್ದಳು.

ಎಷ್ಟರಮಟ್ಟಿಗೆ ಮೊಬೈಲ್ ಬಳಸಬೇಕು ಎಂಬ ಶಿಸ್ತು ಮತ್ತು ಶಿಕ್ಷಣವನ್ನು ಮನೆಯಲ್ಲಿಯೂ ನೀಡಬೇಕಾಗಿದೆ. ಶಾಲೆಗಳಲ್ಲಿಯೂ ನೀಡಬೇಕಾಗಿದೆ. ಎಷ್ಟೋ ಶಾಲೆಗಳಲ್ಲಿ ಮೊಬೈಲ್ ಬಳಸುವುದು ಹೇಗೆ ಎಂಬುದನ್ನೂ ಮಕ್ಕಳೇ ಶಿಕ್ಷಕರಿಗೆ ಕಲಿಸುತ್ತಾರೆ. ಅದು ತಪ್ಪೇನೂ ಅಲ್ಲ. ಒಟ್ಟಿನಲ್ಲಿ ಈ ವಿಷಯದಲ್ಲಿ ಮಕ್ಕಳಿಗಿರುವ ಚುರುಕು ಬುದ್ಧಿಯನ್ನು ಉತ್ತಮ ಮಾರ್ಗದರ್ಶನದೊಂದಿಗೆ ನಿರ್ವಹಿಸುವ ಸವಾಲು, ಪೋಷಕರ ಮುಂದಿದೆ.

ಪ್ರತಿಕ್ರಿಯಿಸಿ: **feedback@sudha.co.in**

